# PART – III

## CHILD DEVELOPMENT AND PEDAGOGY

61. ಸುಮಳು ಪ್ರತಿ ಪಾಠವನ್ನು ಚುರುಕಾಗಿ ಕಲಿಯುವಳು, ಆದರೆ ಲೀಲಳು ಅದೇ ಪಾಠ ಕಲಿಯಲು ಹೆಚ್ಚು ಸಮಯ ತೆಗೆದುಕೊಳ್ಳುವಳು. ಇದು ವಿಕಾಸದ ಈ ತತ್ವವನ್ನು ಪ್ರತಿಬಿಂಬಿಸುತ್ತದೆ.
    (1) ನಿರಂತರತೆ
    (2) ಸಾಮಾನ್ಯತೆಯಿಂದ ನಿರ್ದಿಷ್ಟತೆಗೆ
    (3) ವೈಯಕ್ತಿಕ ಭಿನ್ನತೆ
    (4) ಪರಸ್ಪರ ಸಂಬಂಧ

62. ವ್ಯಕ್ತಿಯಲ್ಲಿ ಸಂಘರ್ಷವನ್ನುಂಟುಮಾಡುವ ಆಲೋಚನೆಗಳನ್ನು ಮನಸ್ಸಿನ ಜಾಗೃತ ಭಾಗದಿಂದ ಅಜಾಗೃತ ಭಾಗಕ್ಕೆ ತಳ್ಳಲ್ಪಡುವ ಪ್ರಕ್ರಿಯೆಯೇ
    (1) ಪ್ರಕ್ಷೇಪಣೆ
    (2) ದಮನ
    (3) ಹಿಮ್ಮರುಳುವಿಕೆ
    (4) ತರ್ಕ ಸಮ್ಮತವಾಗಿಸುವಿಕೆ

63. ಈ ಕೆಳಗಿನ ಯಾವುದು ಸಮೂಹದ ಲಕ್ಷಣವಲ್ಲ ?
    (1) ಹಲವು ಸದಸ್ಯರಿಂದ ಕೂಡಿದ ಒಂದು ಸಾಮಾಜಿಕ ಘಟಕ
    (2) ತನ್ನದೇ ಆದ ನಾಯಕತ್ವ ನಮೂನೆ
    (3) ಸಮೂಹದ ಸದಸ್ಯರು ಸಮಾನ ಗುರಿ ಹೊಂದಿರುತ್ತಾರೆ
    (4) ಪ್ರತಿಯೊಬ್ಬ ಸದಸ್ಯನು ನಿರ್ದಿಷ್ಟ ಪಾತ್ರ ನಿರ್ವಹಿಸುವುದಿಲ್ಲ

64. ಈ ರೀತಿಯ ಉಭಯಸಂಕಟದಲ್ಲಿ ಎರಡೂ ಆಯ್ಕೆಗಳು ಉತ್ತಮ ಆಯ್ಕೆಯಾಗಿರುತ್ತವೆ
    (1) ಆಗಮ – ಆಗಮ ದ್ವಂದ್ವ
    (2) ಆಗಮ – ಅಪಗಮ ದ್ವಂದ್ವ
    (3) ಅಪಗಮ – ಅಪಗಮ ದ್ವಂದ್ವ
    (4) ಆಗಮ – ಅಪಗಮದ್ವಯ ದ್ವಂದ್ವ

65. ಕೋಹ್ಲಬರ್ಗ್‌ರವರ ಪ್ರಕಾರ ಜ್ಞಾನಾತ್ಮಕ ಪ್ರಕ್ರಿಯೆಗಳಾದ ಆಲೋಚನೆ ಮತ್ತು ತಾರ್ಕಿಕತೆ ಮಗುವಿನ ಈ ವಿಕಾಸದಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ
    (1) ದೈಹಿಕ ವಿಕಾಸ
    (2) ಬೌದ್ಧಿಕ ವಿಕಾಸ
    (3) ನೈತಿಕ ವಿಕಾಸ
    (4) ಸಾಮಾಜಿಕ ವಿಕಾಸ

66. ಜೀನ್ ಪಿಯಾಜೆರವರ ಪ್ರಕಾರ ಮಗುವು ಗಾತ್ರ ಮತ್ತು ವಸ್ತುವಿನ ಆಕಾರಕ್ಕೆ ಸಂಬಂಧಿಸಿದ ಪರಿಕಲ್ಪನೆಗಳನ್ನು ಬೆಳೆಸಿಕೊಳ್ಳುವ ಹಂತ
    (1) ಸಂವೇದನಾ ಗತಿ ಹಂತ
    (2) ಕಾರ್ಯಪೂರ್ವ ಹಂತ
    (3) ಮೂರ್ತ ಕಾರ್ಯಗಳ ಹಂತ
    (4) ಔಪಚಾರಿಕ ಕಾರ್ಯಗಳ ಹಂತ



www.kpscvaani.com

67. ಕಲಿಕೆಯ ಸಾಮಾಜಿಕ ಸಂರಚನಾವಾದವನ್ನು ಮಂಡಿಸಿದವರು

(1) ವೈಗೋಟ್‌ಸ್ಕಿ
(2) ಜೆರೋಮ್ ಬ್ರೂನರ್
(3) ಬಂಡೂರ
(4) ಗ್ಯಾನೆ

68. ನೈತಿಕ ಬೆಳವಣಿಗೆಯ ಸಿದ್ಧಾಂತವನ್ನು ಪ್ರತಿಪಾದಿಸಿದವರು

(1) ಬಂಡೂರ
(2) ಕೋಲ್‌ಬರ್ಗ್
(3) ಬ್ರೂನರ್
(4) ಗ್ಯಾನೆ

69. ಇವುಗಳಲ್ಲಿ ಯಾವುದು ಸಮಂಜಸತೆಯ ಅರ್ಥವನ್ನು ಕೊಡುತ್ತದೆ ?

(1) ಪರೀಕ್ಷೆಯು ಅಳತೆ ಮಾಡಬೇಕಾದುದನ್ನೆ ಅಳೆದರೆ
(2) ಪರೀಕ್ಷೆಯ ಅಳತೆಯಲ್ಲಿ ಸ್ಥಿರತೆಯನ್ನು ತೋರುವಿಕೆ
(3) ಅಳತೆಯನ್ನು ಸುಲಭವಾಗಿ ಮಾಡುವಿಕೆ
(4) ಮತ್ತೆ ಮತ್ತೆ ಅಳೆದಾಗ ಅಳತೆಯಲ್ಲಿ ವ್ಯತ್ಯಾಸ ತೋರುವಿಕೆ

70. ವಿದ್ಯಾರ್ಥಿಗಳ ಬಲಗಳು ಮತ್ತು ನ್ಯೂನತೆಗಳನ್ನು ಪತ್ತೆಹಚ್ಚಲು ಬಳಸುವ ಪರೀಕ್ಷೆ

(1) ಪ್ರಮಾಣಬದ್ಧಗೊಳಿಸಿದ ಪರೀಕ್ಷೆ
(2) ಕ್ಲಿನಿಕಲ್ ಪರೀಕ್ಷೆ
(3) ಸಾಧನಾ ಪರೀಕ್ಷೆ
(4) ನೈದಾನಿಕ ಪರೀಕ್ಷೆ

71. ಒಂದು ಆರು ವರ್ಷ ಮಾನಸಿಕ ವಯಸ್ಸುಳ್ಳ ಮಗುವು ನಾಲ್ಕು ವರ್ಷ ವಯಸ್ಸಿನ ಮಗುವಾಗಿದ್ದರೆ, ಅವನನ್ನು ನಾವು ಹೀಗೆಂದು ಕರೆಯಬಹುದು

(1) ಸಾಧಾರಣಕ್ಕಿಂತ ಮೇಲ್ಪಟ್ಟ
(2) ಸಾಧಾರಣ
(3) ಪ್ರತಿಭಾವಂತ
(4) ದಡ್ಡ

72. ಬ್ಲೂಮ್‌ನ ಪರಿಷ್ಕೃತ ಬೋಧನಾ ಉದ್ದೇಶದ ವರ್ಗೀಕರಣದ ಪ್ರಕಾರ ಜ್ಞಾನಾತ್ಮಕ ಪ್ರಕ್ರಿಯೆಯ ಅತ್ಯುನ್ನತ ಹಂತವು

(1) ಅರ್ಥಮಾಡಿಕೊಳ್ಳುವುದು
(2) ಮೌಲ್ಯಮಾಪನ
(3) ಸೃಷ್ಟಿಸುವುದು
(4) ಸಂಶ್ಲೇಷಿಸುವುದು

73. ಬಹುಮುಖ ಬುದ್ಧಿಶಕ್ತಿ ಸಿದ್ಧಾಂತದ ಪ್ರಕಾರ ಎಲ್ಲಾ ರೀತಿಯ ಪ್ರಾಣಿಗಳನ್ನು, ಲವಣಗಳನ್ನು ಮತ್ತು ಸಸ್ಯಗಳನ್ನು ಗುರುತಿಸುವ ಹಾಗೂ ವರ್ಗೀಕರಿಸುವ ಸಾಮರ್ಥ್ಯವನ್ನು ಹೀಗೆ ಕರೆಯುವರು

(1) ನೈಸರ್ಗಿಕ ಬುದ್ಧಿಶಕ್ತಿ
(2) ಶಾಬ್ದಿಕ ಭಾಷಾ ಬುದ್ಧಿಶಕ್ತಿ
(3) ಅಂತರ್ ವ್ಯಕ್ತ ಬುದ್ಧಿಶಕ್ತಿ
(4) ತಾರ್ಕಿಕ ಗಣಿತೀಯ ಬುದ್ಧಿಶಕ್ತಿ

74. ವಿಷಯ ಸಂಜ್ಞಾನ ಪರೀಕ್ಷೆಯು ಅಳೆಯುವುದು

(1) ಮನೋವೃತ್ತಿ
(2) ವ್ಯಕ್ತಿತ್ವ
(3) ಸೃಜನಶೀಲತೆ
(4) ಬುದ್ಧಿಶಕ್ತಿ



www.kpscvaani.com

**75.** ಬುದ್ಧಿಶಕ್ತಿ ಕಾರ್ಯನಿರ್ವಹಣಾ ಪರೀಕ್ಷೆಯು ಈ ಸಾಮರ್ಥ್ಯವನ್ನು ಅಳೆಯುತ್ತದೆ

(1) ಸಂಖ್ಯೆ ಸಂಬಂಧ (2) ಭಾಷೆ

(3) ಸೃಜನಶೀಲತೆ (4) ಕೈಚಳಕ

**76.** ತರುಣರ ಸಾಮಾಜಿಕ ಬೆಳವಣಿಗೆಗೆ ಉದಾಹರಣೆ ಎಂದರೆ

(1) ಸಾಹಸ ಪ್ರವೃತ್ತಿ (2) ಬೆಳವಣಿಗೆಯ ಬುಗ್ಗೆ

(3) ಗುಂಪು ರಚನೆ (4) ವಿಮರ್ಶಾತ್ಮಕ ಸಾಮರ್ಥ್ಯ

**77.** ನ್ಯೂನತೆಯುಳ್ಳ ಮಕ್ಕಳಿಗಾಗಿ ಇರುವ ಕೇಂದ್ರೀಯ ನಿಯೋಜಿತ ಸಮಗ್ರ ಶಿಕ್ಷಣದ ಮೂಲಕ ಶೈಕ್ಷಣಿಕ ಅವಕಾಶಗಳನ್ನು ಇಲ್ಲಿ ನೀಡುವ ಗುರಿ ಹೊಂದಿದೆ

(1) ಸಾಮಾನ್ಯ ಶಾಲೆಗಳು (2) ವಿಶೇಷ ಶಾಲೆಗಳು

(3) ಮುಕ್ತ ಶಾಲೆಗಳು (4) ಅಂಧ ಪರಿಹಾರ ಸಂಘ ಶಾಲೆಗಳು

**78.** ಸೃಜನಶೀಲತೆಯು ಸಾಮಾನ್ಯವಾಗಿ ಇದಕ್ಕೆ ಸಂಬಂಧಿಸಿದೆ

(1) ಏಕಮುಖ ಚಿಂತನೆ (2) ಬಹುಮುಖ ಚಿಂತನೆ

(3) ಮಾದರೀಕರಣ (4) ಅನುಕರಣೆ

**79.** ಪರಿಣಾಮಕಾರಿ ಸಮನ್ವಯತೆಯು ಕೆಳಗಿನ ಒಂದನ್ನು ಬಿಟ್ಟು ಉಳಿದವನ್ನೊಳಗೊಂಡಿದೆ

(1) ಸಾಮರ್ಥ್ಯ ಬೆಳವಣಿಗೆ (2) ಸೂಕ್ಷ್ಮಗ್ರಾಹೀಕರಣ

(3) ಪ್ರತ್ಯೇಕಿಸುವುದು (4) ಪೋಷಕರನ್ನೊಳಗೊಳ್ಳುವುದು

**80.** ಡಿಸ್‌ಗ್ರಾಫಿಯಾವು ಮುಖ್ಯವಾಗಿ ಇದಕ್ಕೆ ಸಂಬಂಧಿಸಿದ ಸಮಸ್ಯೆಗಳನ್ನೊಳಗೊಂಡಿದೆ

(1) ಮಾತನಾಡುವುದು (2) ಮಾತನಾಡುವುದು ಮತ್ತು ಕೇಳಿಸಿಕೊಳ್ಳುವುದು

(3) ಬರವಣಿಗೆ (4) ಓದುವುದು

**81.** ಆಶ್ರಿತ ಮಾನಸಿಕ ನ್ಯೂನತೆಯುಳ್ಳ ಮಕ್ಕಳ ಬುದ್ಧಿಶಕ್ತಿ ಸೂಚ್ಯಾಂಕವು

(1) 90 – 109 (2) 20 – 25 (3) 80 – 85 (4) 30 – 35

**82.** ವೀಕ್ಷಣಾ ಕಲಿಕೆಯಲ್ಲಿನ ಅನುಸರಿಸಬೇಕಾದ ಹಂತಗಳ ಅನುಕ್ರಮವು

(1) ಕಾರ್ಯನಿರ್ವಹಣೆ, ಪರಿಣಾಮಗಳು, ಅರ್ಜನೆ, ಧಾರಣೆ

(2) ಧಾರಣೆ, ಅರ್ಜನೆ, ಪರಿಣಾಮಗಳು, ಕಾರ್ಯನಿರ್ವಹಣೆ

(3) ಪರಿಣಾಮಗಳು, ಕಾರ್ಯನಿರ್ವಹಣೆ, ಧಾರಣೆ, ಅರ್ಜನೆ

(4) ಅರ್ಜನೆ, ಧಾರಣೆ, ಕಾರ್ಯನಿರ್ವಹಣೆ, ಪರಿಣಾಮಗಳು



www.kpscvaani.com

83. ಪರಿಕಲ್ಪನೆಗಳ ಬೆಳವಣಿಗೆಯು ಮೂಲತಃ ಇದರ ಅಂಗವಾಗಿದೆ

(1) ಭಾವನಾತ್ಮಕ ಬೆಳವಣಿಗೆ
(2) ಬೌದ್ಧಿಕ ಬೆಳವಣಿಗೆ
(3) ಶಾರೀರಿಕ ಬೆಳವಣಿಗೆ
(4) ಸಾಮಾಜಿಕ ಬೆಳವಣಿಗೆ

84. ಪೂರ್ವಕಲಿಕೆಯು ಹೊಸ ಸನ್ನಿವೇಶದ ಕಲಿಕೆಯಲ್ಲಿ ಯಾವ ರೀತಿಯ ವ್ಯತ್ಯಾಸವನ್ನು ಮಾಡದಿದ್ದರೆ, ಅದನ್ನು ಹೀಗೆನ್ನಬಹುದು

(1) ಧನಾತ್ಮಕ ಕಲಿಕೆಯ ವರ್ಗಾವಣೆ
(2) ಋಣಾತ್ಮಕ ಕಲಿಕೆಯ ವರ್ಗಾವಣೆ
(3) ಶೂನ್ಯ ಕಲಿಕೆಯ ವರ್ಗಾವಣೆ
(4) ಪಾರ್ಶ್ವ ವರ್ಗಾವಣೆ

85. ಗ್ಯಾನೆಯವರ ಪ್ರಕಾರ ಉನ್ನತ ಮಟ್ಟದ ಕಲಿಕೆಯು

(1) ಸಮಸ್ಯೆ ಪರಿಹಾರ
(2) ಪರಿಕಲ್ಪನೆಗಳ ಕಲಿಕೆ
(3) ಸರಪಳಿ
(4) ನಿಯಮ ಕಲಿಕೆ

86. ಪರಿಕಲ್ಪನಾ ಸಾಧನೆ ಮಾದರಿಯನ್ನು ಪ್ರತಿಪಾದಿಸಿದವರು

(1) ಬಂಡೂರ
(2) ಬ್ರೂನರ್
(3) ಗ್ಯಾನೆ
(4) ಕೋಲ್‌ಬರ್ಗ್

87. ಹಿಂದೆ ಕಲಿತದ್ದನ್ನು ಧಾರಣೆಸಿ, ಪುನಃ ಸ್ಮರಣೆಗೆ ತರುವುದೇ

(1) ವಿಸ್ಮೃತಿ
(2) ಅಭಿಪ್ರೇರಣೆ
(3) ಸ್ಮೃತಿ
(4) ಅವಧಾನ

88. ಆರ್ಕಿಮಿಡೀಸನು ''ಯುರೇಕಾ !'' ಎಂದು ಕೂಗುತ್ತಾ ಓಡಿಬಂದನು. ಇದರಲ್ಲಿ ಯಾವ ವಿಧದ ಕಲಿಕೆಯು ಅಡಗಿದೆ ?

(1) ವೀಕ್ಷಣಾ ಕಲಿಕೆ
(2) ಯತ್ನ – ದೋಷ ಕಲಿಕೆ
(3) ಅನುಬಂಧ ಕಲಿಕೆ
(4) ಒಳನೋಟ ಕಲಿಕೆ

89. ಕಾರ್ಯಕ್ರಮಾನ್ವಯ ಕಲಿಕೆಯು ಆಧರಿಸಿರುವುದು

(1) ಕ್ರಿಯಾಜನ್ಯ ಅನುಬಂಧ
(2) ಯತ್ನ – ದೋಷ ಕಲಿಕೆ
(3) ಒಳನೋಟ ಕಲಿಕೆ
(4) ಶಾಸ್ತ್ರೀಯ ಅನುಬಂಧ

90. ಈ ಕೆಳಗಿನ ಯಾವುದು ಕ್ರಿಯಾ ಸಂಶೋಧಕನನ್ನು ಕ್ರಿಯಾಯೋಜನೆಗೆ ನಿರ್ದೇಶಿಸುತ್ತದೆ ?

(1) ಸಂಭವನೀಯ ಕಾರಣಗಳ ವಿಶ್ಲೇಷಣೆ
(2) ಕ್ರಿಯಾಪ್ರಾಕಲ್ಪನೆಯನ್ನು ನಿರೂಪಿಸುವುದು
(3) ಪೂರ್ವ ಪರೀಕ್ಷಾದತ್ತದ ವಿಶ್ಲೇಷಣೆ
(4) ಸಮಸ್ಯೆಯನ್ನು ನಿರ್ದಿಷ್ಟಗೊಳಿಸುವುದು



www.kpscvaani.com